



# ಅವಳಿ ಶಿಶುಗಳ ಜಲ ಸಾಹಸ..!



ವಿಲಿಯಮ್ ಹಾಗೂ ಎಲ್ಲೆನಿಟಾ ಇಬ್ಬರೂ 9 ತಿಂಗಳ ಪುಟ್ಟ ಅವಳಿಗಳು. ಈ ಕಂದಮ್ಮಗಳಿಗೆ ಮಾತು ಬಾರದು, ನಡೆಯುವುದಕ್ಕೆ ಇನ್ನೂ ಸಮಯ ಬೇಕು. ಆದರೆ ನೀರಿನಲ್ಲಿ ಈಜುವುದರಲ್ಲಿ ಮಾತ್ರ ತುಂಬಾ ಜಾಣರು!. ಬಟರ್ ಫ್ಲೈ ಸ್ಟೈಲ್, ಬೆನ್ನ ಮೇಲೆ ಮಲಗಿ ಮಾಡುವ ಬ್ಯಾಕ್ ಸ್ಟ್ರೋಕ್‌ಗಳೆಲ್ಲಾ ಚೆನ್ನಾಗಿ ಗೊತ್ತು. ಇವರಿಬ್ಬರನ್ನೂ ನೀರಿಗಿಳಿಸಿದರೆ ಸಾಕು ಥೇಟ್ ಮೀನುಗಳ ಹಾಗೆ ಅತೀ ಸಲೀಸಾಗಿ ಈಜುತ್ತಾ ಸಾಗುತ್ತವೆ.

ನಗು ನಗುತ್ತಾ ಕಾಲನ್ನು ಪಟ ಪಟನೆ ಬಡಿಯುತ್ತಾ ನೀರಿನಲ್ಲಿ ಮುಂದೆ ಸಾಗುವ ಪರಿಯನ್ನು ನೋಡಿದವರೆಲ್ಲಾ ಬೆಕ್ಕಸ ಬೆರಗಾಗುವುದು ದಿಟ. ಇದಷ್ಟೇ ಅಲ್ಲ, ಇವೆರಡು ಮಕ್ಕಳೂ ದಿನ ತುಂಬುವ ಮೊದಲೇ ಅಂದರೆ 6 ವಾರ ಮೊದಲೇ, ಎಮರ್ಜೆನ್ಸಿ ಸಿಸೇರಿಯನ್‌ಆಗಿ ಹುಟ್ಟಿವೆಯಂತೆ. ಇಂಗ್ಲೆಂಡ್‌ನ ಗ್ಲೌಸ್ಟೆರ್‌ಶೈರ್‌ನಲ್ಲಿರುವ ತಂದೆ ವಿಕ್ಟರ್(49 ವರ್ಷ) ಹಾಗೂ ತಾಯಿ ಚಾರ್ಲೆಟ್(35 ವರ್ಷ) ಇಬ್ಬರೂ ಸಿಪ್ರಸ್ ಪ್ರವಾಸಕ್ಕೆ ಹೋಗಿದ್ದಾಗ ಯಾವುದೇ ರಕ್ಷಾ ಕವಚವನ್ನು ತೊಡಿಸದೇ ಈಜುಗೊಳದ ಬೇಬಿ ಪೂಲ್‌ನಲ್ಲಿ ಈ ಅವಳಿಗಳನ್ನು ಬಿಟ್ಟರಂತೆ. ಆಗ ಮುಖವನ್ನು ಮೇಲ್ಮುಖವಾಗಿರಿಸಿ ಇವೆರಡೂ ಈಜಲು ಶುರು ಮಾಡಿದವಂತೆ. ಮೊದಲ ಬಾರಿ 5 ಮೀಟರ್ ಉದ್ದವನ್ನು ಕ್ರಮಿಸಿದ ಈ ಮಕ್ಕಳು ಈಗ 25 ಮೀಟರ್‌ನಷ್ಟು ದೂರವನ್ನು ಈಜುತ್ತಾ ದಾಟುತ್ತಾರಂತೆ.

ಈ ಅವಳಿಗಳು ಈಜುತ್ತಿರುವ ವೀಡಿಯೊವನ್ನು ಇಂಟರ್‌ನೆಟ್‌ನಲ್ಲಿ ಹಾಕಿದ ಒಂದು ವಾರದೊಳಗೇ ಸುಮಾರು ಐವತ್ತು ಸಾವಿರ ಮಂದಿ ವೀಕ್ಷಿಸಿದ್ದಾರೆ. ಹಸುಗೂಸಾಗಿರುವಾಗಲೇ ಇಷ್ಟು ಚೆನ್ನಾಗಿ ಈಜುವ ನಮ್ಮ ಮಕ್ಕಳು 2028ರ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿ ಚಿನ್ನದ ಪದಕವನ್ನು ಗೆಲ್ಲುತ್ತಾರೆ ಎಂಬುದು ತಂದೆಯ ಅಚಲ ವಿಶ್ವಾಸ.

■ ವಿದ್ಯಾ ವಿ ಹಾಲಭಾವಿ